ಓದುತ್ತಿದ್ದೆ. ಓದಿದ್ದನ್ನು ನೆನಪಿಟ್ಟುಕೊಳ್ಳುತ್ತಿದ್ದೆ. ಹುಟ್ಟುತ್ತಲೇ ಯಾರಿಗಾದರೂ ಫೋಟೋಗ್ರಾಫಿಕ್ ಮೆಮೊರಿ, ಅಸಾಧಾರಣ ನೆನಪಿನ ಶಕ್ತಿ ಇರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಆದರೆ, ನಾವದನ್ನು ಬೆಳೆಸಿಕೊಳ್ಳಬಹುದು. ನನಗೆ ಅಂತಹ ನೆನಪಿನ ಶಕ್ತಿ ಇತ್ತು.

◆ **'All God's Children Need Traveling Shoes' ಈ ಶೀರ್ಷಿಕೆಯ ಮಹತ್ವವೇನು?**

**You Can't Go Home Again** ಎನ್ನುವ ಥಾಮಸ್ ವೂಲ್ಫ್‌ನ ಶೀರ್ಷಿಕೆಯನ್ನು ಚಿಕ್ಕವಳಾಗಿದ್ದಾಗಲೂ ಒಪ್ಪಿರಲಿಲ್ಲ. ಸತ್ಯವೇನೆಂದರೆ ನೀವು ಮನೆಯನ್ನು ಬಿಡುವುದು ಸಾಧ್ಯವೇ ಇಲ್ಲ. ನಿಮ್ಮೊಂದಿಗೆ ಅದು ಸದಾ ಇರುತ್ತದೆ. ನಿಮ್ಮ ಉಗುರಿನ ತುದಿಯಲ್ಲಿ, ಕೂದಲಲ್ಲಿ, ನಿಮ್ಮ ನಗುವಿನಲ್ಲಿ, ನಿಮ್ಮ ನಿತಂಬಗಳಲ್ಲಿ, ನಿಮ್ಮ ಮೊಲೆಗಳ ನಡುವಿನ ಸೀಳಿನಲ್ಲಿ, ಹೀಗೆ ನೀವು ಎಲ್ಲೇ ಹೋದರೂ ನಿಮ್ಮೊಂದಿಗಿರುತ್ತದೆ. ನೀವು ಬೇರೆ ಜಾಗಗಳ ಬಗ್ಗೆ ವ್ಯಾಮೋಹ ಬೆಳೆಸಿಕೊಳ್ಳಬಹುದು. ಅಲ್ಲಿನ ರೀತಿ ನೀತಿ ಕಲಿಯಬಹುದು. ಆದರೆ, ಮನೆ ನಿಮ್ಮೊಂದಿಗಿರುತ್ತದೆ ಎನ್ನುವುದು ಸತ್ಯ. ಎಲ್ಲರೂ ಅದನ್ನು ಹುಡುಕುತ್ತಲೇ ಇರುತ್ತಾರೆ. ಯಹೂದಿಗಳು ಇಸ್ರೇಲ್‌ಗೆ, ಕಪ್ಪು ಅಮೆರಿಕನ್ನರು ಮತ್ತು ಆಫ್ರಿಕನ್ನರು ಆಫ್ರಿಕಾಗೆ, ಯುರೋಪಿಯನ್ನರು ಇಂಗ್ಲೆಂಡ್ ಮತ್ತು ಐರ್ಲೆಂಡಿಗೆ, ಜರ್ಮನ್ ಹಿನ್ನಲೆಯವರು ಜರ್ಮನಿಗೆ ಹೋಗಲು ಬಯಸುತ್ತಾರೆ. ಇದೊಂದು ವಿಚಿತ್ರ ಹುಡುಕಾಟ. ನಮಗೆ ನಾವೇ ಹೇಳಿಕೊಳ್ಳಬಹುದು, 'ಚಿನ್ನ ನಾನು ಟೆಲ್ ಅವೀವ್‌ನಲ್ಲಿರ್ತೀನಿ' ಅಂತ. ಆದರೆ, ಸತ್ಯ ಬಹಳ ಕಟುವಾದದ್ದು. ಈ ಪುಸ್ತಕ ಮರಳಿ ಮನೆಗೆ ಹೋಗುವ ಕುರಿತಾದದ್ದು.

◆ **ನೀವು ಬರಹಗಾರರಿಗೆ ಅತ್ಯಂತ ಅಗತ್ಯವಾದ ಸಲಕರಣೆಗಳನ್ನು ಕೊಡಬೇಕು ಅಂದರೆ ಬರೆಯಲು ಕಾಗದದ ಹೊರತಾಗಿ ಮತ್ತೇನು ಕೊಡುವಿರಿ?**

ಕಿವಿಗಳು. ಭಾಷೆಯನ್ನು ಕೇಳಿಸಿಕೊಳ್ಳಲು ಕಿವಿಗಳು. ಯಾವುದೋ ಒಂದು ಸಲಕರಣೆ ಮುಖ್ಯ ಅಂತಲ್ಲ. ಎಲ್ಲಕ್ಕಿಂತ ಮೊದಲು ಧೈರ್ಯ ಬೇಕು.

◆ **ನಿಮ್ಮ ಕೃತಿ ಪ್ರಕಟವಾಗದೆ ಹೋಗಬಹುದಿತ್ತು ಅಂತ ನಿಮಗೆಂದಾದರೂ ಅನ್ನಿಸಿದೆಯೇ? ಒಂದು ವೇಳೆ ರ್‍ಯಾಂಡಮ್ ಹೌಸ್‌ನವರು ನಿಮ್ಮ ಹಸ್ತಪ್ರತಿಯನ್ನು ಪ್ರಕಟಿಸದೆ ಹಿಂತಿರುಗಿಸಿದ್ದರೂ ನೀವು ಬರವಣಿಗೆಯನ್ನು ಮುಂದುವರೆಸುತ್ತಿದ್ದಿರಾ?**

ಅಷ್ಟು ಸುಲಭ ಅಲ್ಲ, ಆದರೂ ಬಹುಶಃ ಬೇರೆನಾದರೂ ಮಾಡುತ್ತಿದ್ದೆ ಅಂತ ನಂಗೊತ್ತು. ನೀವು ಮಾಡುವಂತಿಲ್ಲ, ನೀವು ಬದುಕುವಂತಿಲ್ಲ ಎಂದು ಹೇಳುವ ಸಮಾಜವನ್ನು ಎದುರಿಸಿ ಕಪ್ಪು ಜನ ಇಂದಿಗೂ ಇದ್ದಾರೆ. ನೀವು ಕೇವಲ ಬದುಕುಳಿದರೆ ಯಶಸ್ವಿಯಾಗಲು ಸಾಧ್ಯವಿಲ್ಲ. ನೀವು ಯಶಸ್ವಿಯಾದರೆ ನಿಮ್ಮ ಜೀವಂತಿಕೆಯ ಉತ್ಸಾಹ ಇಲ್ಲವೇ ಸಹಾನುಭೂತಿ ಇಲ್ಲವೆ ಹಾಸ್ಯ ಇಲ್ಲವೆ ನಿಮ್ಮತನದೊಂದಿಗೆ ಯಶಸ್ವಿಯಾಗಲು ಸಾಧ್ಯವಿಲ್ಲ. 'ಯಾರೂ ನಿನ್ನ ಹಿಂದಡಿಯಿಡುವಂತೆ ಮಾಡಲು ಬಿಡಬೇಡ' ಎನ್ನುವ ಹಾಡೊಂದಿದೆ. ನಾನು ಕೂಡ ಇದನ್ನು ನಂಬುತ್ತೇನೆ. ಹಾಗಾಗಿ ಪುಸ್ತಕ ಪ್ರಕಟವಾಗದಿದ್ದರೆ ಏನಂತೆ, ನಾವಿಂದು ಕೂತು ಮಾತಾಡುತ್ತಿರುವ ಈ ರಂಗಮಂದಿರವನ್ನು ಬಹುಶಃ ವಿನ್ಯಾಸ ಮಾಡಿರುತ್ತಿದ್ದೆ. ಯಾಕಾಗಬಾರದು? ಯಾರೋ ಒಬ್ಬ ಇದನ್ನು ಕಟ್ಟಿದ ತಾನೇ? 'ನಾನು ಮನುಷ್ಯ. ಮನುಷ್ಯರಿಗೆ ಸಂಬಂಧಿಸಿದ್ದು ಯಾವುದೂ ನನಗೆ ಪರಕೀಯವಲ್ಲ' ಎನ್ನುವ ಟೆರೆನ್ಸ್‌ನ ಮಾತನ್ನು ಒಪ್ಪುತ್ತೇನೆ. ಅವನ ಕುರಿತು ನೀವು ಎನ್‌ಸೈಕ್ಲೋಪಿಡಿಯಾದಲ್ಲಿ ನೋಡಿ. ಅವನನ್ನು ರೋಮನ್ ಸೆನೆಟರ್ ಒಬ್ಬನಿಗೆ ಮಾರಾಟ ಮಾಡಲಾಗುತ್ತದೆ. ಅವನನ್ನು ಆ ಸೆನೆಟರ್